ಗಂಡಸನ್ನು ನಿಜಕ್ಕು ನನಗೆ ತಡೆಯಬೇಕೆನಿಸಲಿಲ್ಲ.

'ಈ ನಡುವೊಮ್ಮೆ ಬೇಸತ್ತು, ಒಂದೇ ರೂಮಿನಲ್ಲಿ ಗಂಡಹೆಂಡಿರಂತೆ ಇರಲಿಕ್ಕಾಗದ ಮೇಲೆ ಯಾಕಿರಬೇಕು? ಡಿವೋರ್ಸ್ ಮಾಡಬಹುದಲ್ಲವಾ ಎಂದು ಕೇಳಿದೆ ಅಷ್ಟೆ. ನಿರುಮ್ಮಳವಾಗಿ ಗುಡ್ಐಡಿಯಾ ಅಂತಂದುಬಿಟ್ಟಳು! ಈಗ ಡಿವೋರ್ಸಿಗೆ ಸೈನ್ ಮಾಡಿ ಆಗಿದ್ದರೂ ಒಟ್ಟಿಗಿದ್ದೀವಿ, ಸಿದ್ಧ್... ಅದೇ ಮನೆಯಲ್ಲಿ, ಆದರೆ ಬೇರೆ ಬೇರೆ ರೂಮುಗಳಲ್ಲಿ... ವಿಚಿತ್ರ ಅಲ್ಲವಾ!! ಯಾರಿಗೂ ಇಂಥ ಕಷ್ಟ ಬೇಡ...' ಇಷ್ಟು ಹೇಳುವಾಗ ಪಾ–ನ ಕಣ್ಣುಗಳು ದಳಬಳನೆ ಹನಿಯತೊಡಗಿದವು. ನಾನೇ ಮೇಜಿನಲ್ಲಿದ್ದ ಟಿಶ್ಯೂವೆತ್ತಿಕೊಂಡು ಅವನ ಕಣ್ಣೊರೆಸಿದೆ. 'ನನಗೆ ಅರ್ಥ ಆಗುತ್ತೆ... ಪಾ, ಸಮಾಧಾನ ತಂದುಕೋ...' ಅಂತಂದೆ. 'ಅದು ಸರಿ... ಈ ವಿಷಯವನ್ನ ನನ್ನಿಂದ ಇಷ್ಟು ದಿವಸ ಮುಚ್ಚಿಟ್ಟಿದ್ದೇಕೆ, ಪಾ? ಮಾ–ಳಿಗಿರಲಿ, ನೀನಾದರೂ ಹೇಳಬಹುದಿತ್ತಲ್ಲವಾ? ಇಬ್ಬರೂ ಎಷ್ಟು ನಾಟಕ ಮಾಡಿದಿರಿ ಅಲ್ಲವಾ? ಫೋನಿನಲ್ಲಿ, ಚಾಟ್‌ನಲ್ಲಿ, ಸ್ಕೈಪಿನಲ್ಲಿ ಸಿಕ್ಕಾಗ ಒಂದು ಸಲವೂ ಸುಳುಹು ಕೂಡ ಕೊಡಲಿಲ್ಲವಲ್ಲ... ಯಾಕೆ, ಪಾ? ಹೇಗೆ, ಪಾ?' ಹೀಗೆ ಕೇಳುತ್ತಿರುವಾಗ ನನ್ನೊಳಗಿನಿಂದಲೂ ಮನಸೇ ಕಳಚಿಕೊಳ್ಳುತ್ತಿದೆ ಅಂತನಿಸಿ, ಹತೋಟಿ ತೀರಿ ನಾನೂ ಬಿಕ್ಕಿಬಿಟ್ಟೆ. ಪಾ ಇವಾವುವಕ್ಕೂ ಉತ್ತರಿಸಲೇ ಇಲ್ಲ. ತಲೆ ತಗ್ಗಿಸಿಕೊಂಡು ಬಿಕ್ಕುಬಿಟ್ಟ. ಮತ್ತೂ ಕೇಳುವಾಗ, 'ಕಾರಣಗಳಿವೆ, ಸಿದ್ಧ್... ಒಂದು ನೀನು ಗೊತ್ತಿಲ್ಲದ ದೇಶದಲ್ಲಿ ಒಬ್ಬನೇ ಇದ್ದೀ... ಇವನ್ನೆಲ್ಲ ನಿನ್ನವರೆಗೆ ತಗೊಂಡು ಹೋಗೋದು ಬೇಡ ಅಂತ ನಾನೇ ಅಂದುಕೊಂಡೆ. ನಿನ್ನ ಮಾ ಈ ಬಗ್ಗೆ ಏನೂ ಹೇಳಲಿಲ್ಲ... ದಿವಸ್, ನಿನ್ನೊಡನೆ ಇರಲೇಬೇಕಾಗಿರೋದಕ್ಕೆ ನಿನ್ನ ಸಲುವಾಗಿ ನಾನು ಹೆತ್ತ ಮಗನಿದ್ದಾನಲ್ಲ, ಅವನ ಕಾರಣವಿದೆ... ಅವನಿಗೊಂದು ದಾರಿಯಾದ ಮೇಲೆ ಅಮ್ಮನಾಗಿ ನನ್ನ ಜವಾಬ್ದಾರಿ ಮುಗಿಯುತ್ತೆ. ಆ ಮುಂದಿನದು ಈ ಭೂಮಿಯ ಮತ್ತು ಈ ದೇಹದ ಋಣ ತೀರಿಸೋದಷ್ಟೇ...' ಎಂದು ಮಾ–ಳ ಮಾತುಗಳನ್ನು ಚಿಕ್ಕದಾಗಿ ವಿವರಿಸಿದ. ಪ್ರಶ್ನೆಗಳಂತೂ ಮಿಕ್ಕೇ ತೀರಿದವು. ತೀರಿಯೂ ತೀರದೆ ಮಿಕ್ಕವು.

ಆ ಬಳಿಕ, ಮರಳಿ ಕಾರೇರಿಕೊಂಡು ಮನೆಯತ್ತ ಹೊರಳುವಾಗ, 'ಸಿದ್ಧ್... ಒಬ್ಬ ಮಗನಾಗಿ ನಿನಗೆ ಇಷ್ಟು ವಿಷಯ ತಿಳಿದಿದ್ದರೆ ಸಾಕು. ಗಂಡಹೆಂಡಿರೆಂದ ಮೇಲೆ ಮಕ್ಕಳು ತಿಳಿಯಬಾರದ ಕೆಲವು ವಿಷಯಗಳಿರುತ್ತವೆ ಅಲ್ಲವಾ?' ಅಂತಂದ ಪಾ, ಬಾಕಿ ಕಾರಣಗಳನ್ನು ಒಳಗೇ ನುಂಗಿಕೊಂಡು ಸುಮ್ಮನಾದ.

ಮನೆ ತಲುಪಿದರೆ, ಮಾ ತನ್ನ ಕೋಣೆಯಿಂದ ಹೊರಬಂದು ನನ್ನನ್ನು ಬರಮಾಡಿಕೊಳ್ಳಲಿಲ್ಲ. ನಾನೇ ಅವಳನ್ನು ಕಾಣಹೋದಾಗ, ಚಿತ್ತವನ್ನು ಆಕಾಶದಲ್ಲೆಲ್ಲೋ ನೆಟ್ಟುಕೊಂಡಿದ್ದಳು. ಎದುರೇ ನಿಂತುಕೊಂಡುಳಿದೆ. ಸುಮಾರು ಹೊತ್ತಿನ ಮೇಲೆ, ನನ್ನತ್ತಲೊಮ್ಮೆ ನೋಡಿ ಕಿರಿದಾಗಿ ನಕ್ಕಳು. ಬಲು ಅಜೀಬನ್ನಿಸಿತು. ನನ್ನನ್ನು ನೋಡಿ ಸಂಭ್ರಮಿಸಲಿಲ್ಲ. ಹಿರಿದು ಹಿಗ್ಗಲಿಲ್ಲ. ಅವಳ ತಲೆ ನೆತ್ತಿಗಳನ್ನು ಸ್ಪಷ್ಟವಾಗಿ ಬಿಡಿಸಿ ಕಾಣಿಸುತ್ತಿದ್ದ ಮೋಟುಗೂದಲು ಮತ್ತು ಹಣೆಯಲ್ಲಿದ್ದ ದೊಡ್ಡನೆ ತಿಲಕಗಳು ನಿಜಕ್ಕು ಅವಳನ್ನು ಸಾಧ್ವಿಯನ್ನಾಗಿಸಿದ್ದವು. ಹಾಗಂತ ಅವಳೇನೂ ಸೀರೆಯುಟ್ಟಿರಲಿಲ್ಲ. ಕಡುನೀಲಿ ಡೆನಿಮ್ಮಿನ ಮೇಲೆ, ಮೊಟುಕಾದ ಬಿಳಿಯಂಗಿ ತೊಟ್ಟಿದ್ದಳು. ಕೊರಳಿನಲ್ಲೊಂದು ಕೆಂಪನೆ ಸ್ಕಾರ್ಫು ಪರಶಿವನ ಕೊರಳು ಬಳಸುವ ಸರ್ಪದೋಪಾದಿ ಸುತ್ತಿ ಹೆಗಲಿಗಿಳಿದಿತ್ತು. ನಾನೇ, 'ಮಾ...' ಅಂತಲೊಮ್ಮೆ ಆರ್ತಗೊಂಡು ಕೂಗಿ ಅವಳನ್ನು ತಡವಹೋದೆ. ಹಿಂಜರಿಯದಿದ್ದರೂ ಈ ಮೊದಲಿನ ಮಾ–ಳಂತೆ ಒಲಿದು ಬರಲಿಲ್ಲ. ರಮಿಸಿ ಮುದ್ದಿಸಲಿಲ್ಲ.